**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ.ಕಂಪ್ಲೆಂಟ್/ಲೋಕ್/ಬಿಸಿಡಿ/2519/2018/ಡಿಆರ್‌ಇ–03

ಬಹುಮಹಡಿಗಳ ಕಟ್ಟಡ,
ಡಾ|| ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿ:25.11.2019.

**ನೋಟೀಸ್**

ವಿಷಯ:– ಹೆಚ್.ಎಸ್.ದೊರೈಸ್ವಾಮಿ ಎಂಬುವವರು ನಮ್ಮ ಸಂಸ್ಥೆಯಲ್ಲಿ ನೀಡಿರುವ ದೂರಿನ ಕುರಿತು.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಗೌರವಾನ್ವಿತ ಲೋಕಾಯುಕ್ತರವರ ಆದೇಶದಂತೆ **ಹುಳಿಮಾವು ಕೆರೆಯ** ಕಟ್ಟೆ ಒಡೆದು ಉಂಟಾಗಿರುವ ಹಾನಿಯ ಕುರಿತು ಗೌರವಾನ್ವಿತ ಲೋಕಾಯುಕ್ತರವರು ದಿನಾಂಕ:25.11.2019ರಂದು ಹೊರಡಿಸಿರುವ ಆದೇಶವನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿದ್ದು, ಆದೇಶದಲ್ಲಿ ತಿಳಿಸಿರುವಂತೆ ಕ್ರಮ ವಹಿಸತಕ್ಕದ್ದು ಹಾಗೂ ತಮ್ಮ ಅನುಪಾಲನಾ ಸಮಗ್ರ ವರದಿಯನ್ನು **ದಿನಾಂಕ:10.12.2019ರೊಳಗಾಗಿ ಈ ಕಚೇರಿಗೆ** ಸಲ್ಲಿಸತಕ್ಕದ್ದು.

ಮುಂದುವರೆದು, ಸದರಿ ಪ್ರಕರಣವು **ದಿನಾಂಕ:10–12–2019 ರಂದು 3–00 ಗಂಟೆಗೆ** ಗೌ.ಲೋಕಾಯುಕ್ತರವರ ಮುಂದೆ ನಿಗಧಿಪಡಿಸಿದೆ.

ಗೌ.ಲೋಕಾಯುಕ್ತರವರ ಕಾರ್ಯದರ್ಶಿಗಳು ಹಾಗೂ
ಉಪನಿಬಂಧಕರು ವಿಚಾರಣೆಗಳು–03,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

ಇವರಿಗೆ,

1. The C.E.O., Namma Bangalore Foundation, 2nd Floor, No.54, Rockline Centre, Richmond Road, Bangalore.
2. The Commissioner, BBMP, Bengaluru.
3. The Secretary, Karnataka State Pollution Control Board, Church Street, Bengaluru.
4. The Chairman, BWSSB, Cauvery Bhavan, Bengaluru
5. The Chief Medical Officer, BBMP, Bengaluru.

# KARNATAKA LOKAYUKTA : BENGALURU

No: LOK/BCD-2519/2018/DRE-3 Date: 25-11-2019

## ORDER

On the complaint filed by Sri. H.S. Doreswamy, the proceedings were initiated for the purpose of taking effective steps for rejuvenation of Hulimavu lake. The matter is being considered by me ever since the month of September – 2018 and on various dates the officials of the BBMP and others were heard and several orders were made.

2. In my earlier order, I had directed the authorities concerned to survey the lake area and remove all the encroachments. Since the notice was issued to the Tahasildar and ADLR of Yelahanka, though they were not the concerned officers and the concerned officers are Tahasildar and ADLR of Anekal Taluk, I had approved the note dated 21.11.2019 submitted by DRE-3. It is useful to extract the said note which reads as hereunder;

*"9) Received letter dated 25.07.2019 from the Assistant Director of Land Records, Yelahanka stating that Hulimavu lake is located within the jurisdiction of Anekal Taluk and in this connection they have written a letter to the Tahasildar, Anekal Taluk for implementing the direction issued by the Hon'ble Lokayukta. Under these circumstances, it is just and necessary to direct the ADLR, Anekal Taluk and Tahasildar, Anekal Taluk to carry out the survey work of lake in question and to take effective steps for removal of encroachment if any in accordance with law and to submit report.*

*10) As per the order dated 03.07.2019, passed by the Hon'ble Lokayukta, the officers of BBMP were required to file the status report regarding the steps taken by them to rejuvenate the lake in question. But, no such report is received.*

*11) Hence, my lord, if approved,*

*(i) Notice will be issued to the ADLR, Anekal Taluk and Tahasildar, Anekal Taluk to carry out the survey work of lake in question & to take effective steps for removal of encroachment if any in accordance with law and submit the status report within 01.02.2020.*

*(ii) Notice will be issued to the authorities of BBMP to submit the status report regarding the steps taken to rejuvenate the lake in question".*

3. All most all the daily News Papers both Kannada and English have published *'A large number of people affected by flooding after Hulimavu lake breached.'* It is useful only to enclose the copy of the news papers who have highlighted the news item i.e.,

(i) The New Indian Express

(ii) The Hindu,

(iii) The Deccan Herald,

(iv) The Times Of India,

(v) Deccan Chronicle,

(vi) Vijaya Karnataka,

(vii) Prajavani

(viii) Vijayavani

(ix) Udayavani

(x) Kannada Prabha

(xi) Samyuktha Karnataka

along with this order for the immediate examination by the authorities concerned.

4. The cause for the breach of the lake and the consequent damage caused to the property and disruption of normal life of the residents is required to be examined as to whether the breach of the lake is on account of the natural calamity or on account of the mischief caused by the miscreants and negligence on the part of the authorities who are required to protect the lake.

5. It is needless to point out that the breach of the lake and flooding of the water from the lake would normally result in damage to the property and disruption of the normal life of the residents of the neighborhood of the lake.

6. Therefore, the BBMP which is entrusted with the responsibility of the rejuvenation of the lake had a duty and obligation to regularly monitor the condition of the lake and any damage being caused to the lake or the lake bed and resulting damage to the people living surrounding the lake.

(i) The steps taken to rehabilitate the people who are affeced on account of the breach of the lake and flooding of water surrounding the lake.

(ii) The steps taken to prevent any disruption of education to the children/students of the residents living surrounding the lake on account of the breach of the lake, as highlighted in the news paper.

(iii) The steps taken to compensate the victims of the breach of the lake and flooding of water etc.,

(iv) The steps taken to maintain the hygiene and quality of sanitation in the area and prevent any outbreak of diseases etc.,

(v) To furnish the names and addresses of the persons who are affected on account of the breach of the lake and flooding of the water.

9. Four (4) weeks time is given to the Officers referred to above to submit the comprehensive report with regard to the matters referred to above and the authorities

7. Since, the News papers referred to above have extensively highlighted the problems faced by the residents of the area and the damage caused to them, I find it unnecessary for me to repeat the same in this order except enclosing the copies of the said news papers namely The Indian Express, The Hindu, Deccan Herald, The Times Of India, Deccan Chronicle, Vijaya Karnataka, Prajavani, Vijayavani, Udayavani, Kannada Prabha, Samyuktha Karnataka.

8. Issue notice to the respondents i.e.,

(i) The Commissioner, BBMP, Bengaluru,

(ii) The Secretary, The Karnataka State Pollution Control Board, Bengaluru and

(iii) The Chairman, BWSSB, Bengaluru and also to

(iv) The Chief Medical officer, BBMP, Bengaluru

directing them to submit report with regard to the issues referred to by me above and also on the following;

concerned are directed to file an interim report within two weeks from today.

List this case on **10.12.2019 at 03-00 p.m.**

Communicate this order to all the parties referred to above.

**(Justice P. Vishwanatha Shetty),**
Lokayukta,
Karnataka State.

GAK*

10) DRE-3)

ವಾಣಿ


ಇಂದಿನ ಸಂಚಿಕೆ ಜತೆ 4 ಪುಟಗಳ ಐಸಿರಿ


| ₹ 5.00 ಮಣಿಪಾಲ | ಬೆಂಗಳೂರು | ಹುಬ್ಬಳ್ಳಿ | ಕಲಬುರಗಿ | ದಾವಣಗೆರೆ | ಮುಂಬೈ

ವಾರಿ ಗ್ಗಡೆ
» 08

## ಅಯೋಧ್ಯೆ ತೀರ್ಪಿಗೆ ಜನರ ತಾಳ್ಮೆಯ ಉತ್ತರ

ಪ್ರಧಾನಿ ಮೋದಿ ಅಭಿನಂದನೆ » 09





ಬೆಂಗಳೂರಿನ ಹುಳಿಮಾವು ಪ್ರದೇಶದಲ್ಲಿ ಕೆರೆ ಕಟ್ಟೆಯೊಡೆದು ರಸ್ತೆ, ಮನೆಗಳಲ್ಲಿ ನೀರು ನಿಂತಿರುವುದು.

# ಕೆರೆ ಒಡೆದು ಪ್ರವಾಹ

## | ಅರೆಕೆರೆಯಲ್ಲಿ ಘಟನೆ | 2,500 ಮನೆಗಳು ಜಲಾವೃತ

**ಬೆಂಗಳೂರು:** ಕೆರೆಗಳ ಮೇಲೆಯೇ ನಿರ್ಮಾಣವಾಗಿರುವ ರಾಜಧಾನಿ ಬೆಂಗಳೂರು ನಗರ ಮತ್ತೊಮ್ಮೆ ಕೆರೆಯ ಆರ್ಭಟಕ್ಕೆ ನಲುಗಿದೆ. ಹೆಚ್ಚು-ಕಡಿಮೆ ಕೇವಲ ಒಂದೂವರೆ ತಿಂಗಳ ಅಂತರದಲ್ಲಿ ನಗರದ ಮೂರನೇ ಕೆರೆಯ ಏರಿ ಒಡೆದು ಅವಾಂತರ ಸೃಷ್ಟಿಸಿದ ಘಟನೆ ಭಾನುವಾರ ಅರೆಕೆರೆ ವಾರ್ಡ್‌ನಲ್ಲಿ ನಡೆದಿದೆ.

ಭರ್ತಿಯಾಗಿದ್ದ ಕೆರೆಯ ಏರಿ ಒಡೆಯುತ್ತಿದ್ದಂತೆ ನೂರಾರು ಮನೆಗಳಿಗೆ ನೀರು ನುಗ್ಗಿದೆ. ನೀರು 1ಕಿ.ಮೀ.ವರೆಗೂ ವ್ಯಾಪಿಸಿತು. ಪರಿಣಾಮ ಹುಳಿಮಾವು ಅಕ್ಷರಶಃ ದ್ವೀಪವಾಗಿಪರಿಣಮಿಸಿತು. ಸುತ್ತಮುತ್ತಲಿನ ಪ್ರದೇಶಗಳಲ್ಲಿದ್ದ ಜನರನ್ನು ಸುರಕ್ಷಿತ

> ಅ.10 ದೊಡ್ಡಬಿದರಕಲ್ಲು ಕೆರೆ ಕೋಡಿ ಒಡೆದಿತ್ತು
>
> ನ.9 ಹೊಸಕೆರೆಹಳ್ಳಿ ಕೆರೆ ಏರಿ ಸ್ಫೋಟ
>
> 4 ಬೋಟ್‌ಗಳು ರಕ್ಷಣೆಗೆ ನಿಯೋಜನೆ

ಪ್ರದೇಶಕ್ಕೆ ಸ್ಥಳಾಂತರಿಸಿ, ವಾಸ್ತವ್ಯಕ್ಕೆ ಅನುಕೂಲ ಕಲ್ಪಿಸಿಕೊಡಲಾಗಿದೆ.

20 ಅಡಿಯಷ್ಟು ಕೆರೆ ಏರಿ ಒಡೆದಿದ್ದರಿಂದ 2,500ಕ್ಕೂಹೆಚ್ಚುಮನೆ ಜಲಾವೃತಗೊಂಡಿವೆ. ಅರೆಕೆರೆಯ ಕೆರೆ ಸುತ್ತಲಿನ ಕಿ.ಮೀ. ವ್ಯಾಪ್ತಿಯಲ್ಲಿ ಕನಿಷ್ಠ ಒಂದರಿಂದ 6 ಅಡಿಯಷ್ಟು ನೀರು ನಿಂತಿರುವುದು ಕಂಡುಬಂದಿತು. ಇದರಿಂದ ತಗ್ಗುಪ್ರದೇಶದ ಮನೆಗಳಲ್ಲಿನ ದಿನಸಿ ಸಾಮಗ್ರಿಗಳು, ಹಾಸಿಗೆ, ಟಿವಿ, ಮತ್ತಿತರ ವಸ್ತುಗಳು, ವಾಹನಗಳು ನೀರಿನಲ್ಲಿ ತೇಲಾಡಿದವು. ಮ. 3ರ ಸುಮಾರಿಗೆ ಈ ಘಟನೆ ನಡೆದಿದೆ. ಕೆರೆ ಏರಿ ಒಡೆಯಲು ಕಾರಣ ತಿಳಿದುಬಂದಿಲ್ಲ. ಒತ್ತುವರಿಗೆ ಅನುಕೂಲಕ್ಕಾಗಿ ಕಿಡಿಗೇಡಿಗಳು ಕೆರೆ ನೀರು ಚರಂಡಿಗೆ ಹರಿಸುವಾಗ ಘಟನೆ ನಡೆದಿರಬಹುದು ಎಂಬ ಅನುಮಾನ ವ್ಯಕ್ತವಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ದೂರು ನೀಡಲಾಗಿದೆ ಎಂದು ಬಿಬಿಎಂಪಿ ಆಯುಕ್ತ ಅನಿಲ್ ಕುಮಾರ್ ಹೇಳಿದ್ದಾರೆ. ▶ ವರದಿ: 2

BENNETT, COLEMAN & CO. LTD. | ESTABLISHED 1838 | TIMESOFINDIA.COM | EPAPER.TIMESOFINDIA.COM

INCLUDES 6 PAGES OF BANGALORE

# THE TIMES O[F INDIA]

To advertise with us, call 1800 120 5474 | To order your copy, call 1800 1200 004 toll f[ree]




## Water Gushes Into Houses In 6 Localities; 2k On Rescue Ops

# Hulimavu lake breach hits 1k families, sinks 300 cars

Photos: Md Asad

### Local Contractor's Illegal Bund Job Goes Awry, Flees

Atul Chaturvedi & Nithya Mandyam | TNN

**Bengaluru:** More than 1,000 families were affected and over 300 cars submerged after the bund of Hulimavu lake, off Bannerghatta Road, south Bengaluru, breached on Sunday, sending water gushing into at least half-a-dozen localities in its neighbourhood.

Preliminary probe said an overzealous contractor who had undertaken works in the lake without taking precautionary measures was responsible for the breach. The contractor, reportedly linked to a few politicians, had gone ahead with the civic works without a green signal from the Bruhat Bengaluru Mahanagara Palike, which is the custodian of

FULL COVERAGE: PAGE 2

Hulimavu lake since 2016.

The magnitude of the man-made breach was such that basements of most apartment complexes in localities near the lake were flooded. Around 12.30pm, water started flowing out from a small opening made in the bund. In 30 minutes, a portion of the embankment gave way. By 3pm, water gushed into areas as far as 2km from the lake, affecting thousands of people.

Arekere (ward 193) corporator Bhagyalakshmi Murali told **TOI**: "I was told a contractor had taken up development activities around the lake over the past two days and had tried to drain it by making a small hole in the bund. The contractor had said he would place sandbags so that the water would not enter residential areas and flow towards storm drain. However, he disappeared after the breach."

Chaos and panic gripped the affected areas after the water level started rising by evening. Many residents abandoned their homes and escaped to safety along with family members, including children and senior citizens. Around 2,000 personnel from different departments, including National Disaster Response Force and civil defence, were pressed into rescue-and-relief operations.

▶ Three BBMP camps, P 2

## LEAK PLUGGED WITH TRUCKLOADS OF SAND



**300** sand truckloads used to plug leak

| | |
|---|---|
| Lake held about **5 crore litres of water** | Families affected: **Over 1,000** |
| Families displaced: **About 350** | Relief centres opened **3** |

Cars submerged **300**



**A STREAM, NOT ROAD:** Residents and rescue personnel wade through knee-deep water; (right) a senior citizen is rescued

### 7.5HR BREACH FLOODS AREAS 2KM AWAY

**12.30pm:** Hulimavu lake breaches, its corporator informed
**2pm:** BBMP chief reaches lake site, takes charge of ops
**3pm:** Water reaches Arekere, 2km from lake
**3.45-4pm:** NDRF, fire brigade receive calls
**5.30pm:** Water level in Arekere still rising
**7.30pm:** Relief centres for displaced open
**8 pm:** Breach sealed with temporary embankment

▶ Sunday floods ruin family's plans for wedding, page 2
▶ Unplanned and rapid growth in low-lying area, P 2
▶ 'Haven't seen anything like this in South Bengaluru', P 2

# ಕಾಮಗಾರಿ ಎಡವಟ್ಟು, ಒಡೆದ ಹುಳಿಮಾವು ಕೆರೆ ಏರಿ

## 2500 ಮನೆಗಳಿಗೆ ನೀರು, ನಿವಾಸಿಗಳಿಗೆ ತಾತ್ಕಾಲಿಕ ಆಶ್ರಯ



ಏರಿ ಒಡೆದ ಕೆರೆ ನೀರು ಜನವಸತಿ ಪ್ರದೇಶಗಳಿಗೆ ನುಗ್ಗುತ್ತಿರುವುದು.



ಜಲಾವೃತ ಮನೆಗಳ ನಿವಾಸಿಗಳನ್ನು ರಕ್ಷಣಾ ಸಿಬ್ಬಂದಿ ರಕ್ಷಿಸುತ್ತಿರುವುದು

ಸಂ.ಕ. ಸಮಾಚಾರ ಬೆಂಗಳೂರು

ನಗರದಲ್ಲಿ ಮತ್ತೊಂದು ಕೆರೆ ಕೋಡಿ ಒಡೆದು ಅಪಾರಸಂಖ್ಯೆಯ ಜನರನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ಹುಳಿಮಾವು ಕೆರೆ ಏರಿ ಒಡೆದ ಪರಿಣಾಮ 2,500ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿ ಈ ಪ್ರದೇಶದ ಜನರು ಪರದಾಡುವಂತಾಯಿತು.

ಭಾನುವಾರದ ರಜೆಯನ್ನು ಅನುಭವಿಸಲು ಸಿದ್ಧವಾಗಿದ್ದ ಹುಳಿಮಾವು ಹಾಗೂ ಸುತ್ತಮುತ್ತಲ ಪ್ರದೇಶದ ಜನರಿಗೆ ಏಕಾಏಕಿ ನೀರು ಹರಿದುಬಂದದ್ದನ್ನು ಕಂಡು ಗಾಬರಿ. ಮಳೆಯೇ ಇಲ್ಲ. ಆದರೂ ರಭಸವಾಗಿ ತಮ್ಮ ಬಡಾವಣೆಗೆ ನೀರು ಹರಿದುಬಂದಿರುವುದರಿಂದ ಅವರೆಲ್ಲರೂ ಕಕ್ಕಾಬಿಕ್ಕಿಯಾದರು. ಉತ್ತರ ಕರ್ನಾಟಕ ಭಾಗದಲ್ಲಿನ ಪ್ರವಾಹದ ನೆನಪು ಮರುಕಳಿಸುವಂತಿತ್ತು ಈ ನೀರಿನ ರಭಸ. ನೆಲಮಹಡಿಯಲ್ಲಿದ್ದವರು ಗಾಬರಿಯಿಂದ ಕೂಡಲೇ ಮನೆ ಮೇಲೆ ಹೋಗಿ ರಕ್ಷಣೆ ಪಡೆದುಕೊಳ್ಳಬೇಕಾಯಿತು.

ಹುಳಿಮಾವು ಕೆರೆ ಏರಿ ಬಳಿ ಕೊಳವೆಯನ್ನು ಅಳವಡಿಸುವ ಕಾಮಗಾರಿ ನಡೆಯುತ್ತಿತ್ತು. ಕಾಮಗಾರಿ ಹಿನ್ನೆಲೆಯಲ್ಲಿ ಕೆರೆಯ ನೀರನ್ನು ಬೇರೆ ಕಡೆಗೆ ಹರಿಸಲು ಜೆಸಿಬಿ ಮೂಲಕ ಕಾಮಗಾರಿಯನ್ನು ಕೈಗೊಳ್ಳಲಾಗಿತ್ತು. ಈ ವೇಳೆ ನಿರ್ಲಕ್ಷ್ಯ ವಹಿಸಿದ ಪರಿಣಾಮ ಶಾಂತಿನಿಕೇತನ, ಕೃಷ್ಣನಗರ, ಹುಳಿಮಾವು ಸೇರಿದಂತೆ ಹಲವು ಲೇಔಟ್‌ಗಳಿಗೆ ನೀರು ನುಗ್ಗಿತು. ಕೆರೆ ಏರಿ ಒಡೆದು ನೀರು ರಭಸವಾಗಿ ಹರಿದಿದ್ದರಿಂದ ಹಲವು ಅಪಾರ್ಟ್‌ಮೆಂಟ್‌ಗಳು, ವಸತಿಗಳು ಎರಡು ಮೂರು ಅಡಿಗಿಂತಲೂ ಹೆಚ್ಚು ನೀರಿನಲ್ಲಿ ಮುಳುಗಿ ಅಪಾರ ಹಾನಿ ಉಂಟಾಯಿತು. ಅಪಾರ್ಟ್‌ಮೆಂಟ್‌ಗಳ ತಳಮಹಡಿಯಲ್ಲಿ ನೀರು ನುಗ್ಗಿ ಕಾರುಗಳು, ದ್ವಿಚಕ್ರವಾಹನಗಳು ಮುಳುಗಡೆಯಾದವು. ರಸ್ತೆಯಲ್ಲಿ ನಿಂತಿದ್ದ ಕೆಲವು ವಾಹನಗಳೂ ನೀರಿನ ರಭಸಕ್ಕೆ ತೇಲಿಕೊಂಡು ಹೋದ ದೃಶ್ಯ ಕಂಡುಬಂತು.

ಹುಳಿಮಾವು ಕೆರೆ ಒಟ್ಟು 140 ಎಕರೆ ಪ್ರದೇಶದಲ್ಲಿ ವ್ಯಾಪಿಸಿದೆ. ಈ ಬಾರಿ ನಗರದಲ್ಲಿ ಭಾರಿ ಮಳೆಯಾದ್ದರಿಂದ ಹುಳಿಮಾವು ಕೆರೆ ಭರ್ತಿಯಾಗಿತ್ತು. ಕಳೆದ ವರ್ಷಕ್ಕಿಂತ ಅಧಿಕ ನೀರು ಶೇಖರಣೆಯಾಗಿತ್ತು. ಇಂತಹ ಸಂದರ್ಭದಲ್ಲಿ ಕೆರೆ ಕೋಡಿ ಬಳಿ ಕಾಮಗಾರಿ ಕೈಗೊಳ್ಳಲಾಗಿತ್ತು. ಮೊದಲೇ ಸಾಕಷ್ಟು ನೀರು ಭರ್ತಿಯಾಗಿದ್ದರಿಂದ ಕೆರೆ ಕೋಡಿಯ ಒಂದು ಭಾಗ ದುರ್ಬಲವಾದ ಹಿನ್ನೆಲೆಯಲ್ಲಿ ಕೆರೆ ಕೋಡಿ ಒಡೆಯಿತು. ಇದರಿಂದಾಗಿ ಜನವಸತಿ ಪ್ರದೇಶಕ್ಕೆ ನೀರು ನುಗ್ಗಿತು. ಇದು ಮಾತ್ರವಲ್ಲದೆ ಬಿಳೇಕಹಳ್ಳಿ ಬಳಿಯ ಖಾಸಗಿ ಆಸ್ಪತ್ರೆಗೂ ನೀರು ನುಗ್ಗಿ ಅಲ್ಲಿ ದಾಖಲಾಗಿದ್ದ ರೋಗಿಗಳು ಹಾಗೂ ಅವರ ಸಂಬಂಧಿಕರು ಪರದಾಡುವಂತಾಯಿತು. ಇನ್ನು ಅಲ್ಲಿನ ಸಿಬ್ಬಂದಿಯಂತೂ ರೋಗಿಗಳನ್ನು ರಕ್ಷಿಸಲು ಹರಸಾಹಸಪಡಬೇಕಾಯಿತು. ವಿಶೇಷ ಎಂದರೆ ನೀರು ಮೀನಾಕ್ಷಿ ಮಾಲ್‌ವರೆಗೆ ಹರಿದಿತ್ತು ಎಂದರೆ, ಕೆರೆಯಲ್ಲಿ ಸಾಕಷ್ಟು ಪ್ರಮಾಣದ ನೀರು ಸಂಗ್ರಹವಾಗಿದ್ದು ಗೊತ್ತಾಗುತ್ತದೆ. ಆದರೆ ಮುನ್ನೆಚ್ಚರಿಕೆ ಇಲ್ಲದೆ ಕಾಮಗಾರಿ ಕೈಗೊಂಡವರು ಎಡವಟ್ಟು ಮಾಡಿರುವುದು ಸ್ಪಷ್ಟವಾಗಿದೆ.

### ನಿರಾಶ್ರಿತರಿಗೆ ಆಶ್ರಯ

ಹುಳಿಮಾವು ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಸಾವಿರಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿ ಮನೆಯಲ್ಲಿದ್ದ ದವಸ ಧಾನ್ಯ ಸೇರಿದಂತೆ ಬಹುತೇಕ ವಸ್ತುಗಳು ನೀರು ಪಾಲಾಗಿರುವುದರಿಂದ ಇಲ್ಲಿನ ನಿವಾಸಿಗಳಿಗೆ ಬಿಬಿಎಂಪಿ ವತಿಯಿಂದ ತಾತ್ಕಾಲಿಕವಾಗಿ ಆಶ್ರಯ ಒದಗಿಸಲಾಗುತ್ತಿದೆ. ಪರಿಹಾರ ಕಾರ್ಯಗಳು ಮುಗಿಯುವವರೆಗೆ ಇಲ್ಲಿನ ನಿವಾಸಿಗಳಿಗೆ ಊಟ ಒದಗಿಸಲು ಕ್ರಮ ಕೈಗೊಳ್ಳುತ್ತಿರುವುದಾಗಿ ಆಯುಕ್ತ ಅನಿಲ್ ಕುಮಾರ್ ತಿಳಿಸಿದ್ದಾರೆ.

### ಹುಳಿಮಾವು ಕಡೆ ರಸ್ತೆ ಬಂದ್

ಕೆರೆ ಏರಿ ಒಡೆದು ಅಪಾರ ಪ್ರಮಾಣದ ನೀರು ಬಡಾವಣೆಗಳು, ರಸ್ತೆಗಳಲ್ಲಿ ಹರಿದ ಪರಿಣಾಮ ಈ ಭಾಗದಲ್ಲಿ ವಾಹನಗಳ ಸಂಚಾರವನ್ನು ಸಂಪೂರ್ಣವಾಗಿ ಸ್ಥಗಿತ ಮಾಡಲಾಯಿತು. ಇಲ್ಲಿನ ಅನೇಕ ರಸ್ತೆಗಳಲ್ಲಿ ಬಸ್‌ಗಳ ಸಂಚಾರವನ್ನೂ ಸ್ಥಗಿತ ಮಾಡಿದ್ದರಿಂದ ಈ ಭಾಗದಲ್ಲಿ ಸಂಚಾರ ಮಾಡುವವರು ಪರದಾಡಬೇಕಾಯಿತು.

### ಪರಿಸ್ಥಿತಿ ನಿಯಂತ್ರಣಕ್ಕೆ ಹರಸಾಹಸ

ಜನವಸತಿ ಪ್ರದೇಶಕ್ಕೆ ನೀರು ಹೆಚ್ಚಿನ ಪ್ರಮಾಣದಲ್ಲೇ ನುಗ್ಗುತ್ತಲೇ ಇದ್ದು, ಪರಿಸ್ಥಿತಿ ನಿಯಂತ್ರಿಸಲು ಬಿಬಿಎಂಪಿ ಅಧಿಕಾರಿಗಳು ಹರಸಾಹಸವನ್ನೇ ನಡೆಸಿದ್ದಾರೆ. ಸ್ಥಳದಲ್ಲಿ ಎರಡು ಎನ್‌ಡಿಆರ್‌ಎಫ್ ತಂಡ ಹಾಗೂ ಬಿಬಿಎಂಪಿ ಸಿಬ್ಬಂದಿ ಸ್ಥಳಕ್ಕೆ ತೆರಳಿ ಪರಿಹಾರ ಕಾರ್ಯಗಳನ್ನು ಕೈಗೊಂಡರೂ ಕೆರೆಯಲ್ಲಿನ ನೀರು ಪ್ರವಾಹದೋಪಾದಿಯಲ್ಲಿ ಸಾಗುತ್ತಿದ್ದುದರಿಂದ ಪರಿಹಾರ ಕಾರ್ಯಕ್ಕೆ ತೊಡಕಾಯಿತು.

### ಅನುಮತಿ ಇಲ್ಲದೆ ಕಾಮಗಾರಿ

ಬಿಡಿಎ ಸುಪರ್ದಿಯಲ್ಲಿರುವ ಕೆರೆಯಲ್ಲಿನ ನೀರು ಖಾಲಿ ಮಾಡಿ ಕೆರೆಯನ್ನು ಅಭಿವೃದ್ಧಿ ಮಾಡುವ ಕಾಮಗಾರಿ ನಡೆಯುತ್ತಿದ್ದರೂ ಇದು ಸ್ಥಳೀಯ ಪಾಲಿಕೆ ಸದಸ್ಯರ ಗಮನಕ್ಕೆ ಬಂದೇ ಇರಲಿಲ್ಲವಂತ. ಅನುಮತಿ ತೆಗೆದುಕೊಳ್ಳದೆ ಕಾಮಗಾರಿ ಆಗುತ್ತಿತ್ತು ಎಂದು ಹೇಳಲಾಗುತ್ತಿದೆ. ಸ್ಥಳೀಯ ಪಾಲಿಕೆ ಸದಸ್ಯರ ಹಾಗೂ ಸ್ಥಳೀಯರ ಸಲಹೆಗಳನ್ನು ಕೇಳದೆ ಕಾಮಗಾರಿ ನಡೆಸಿದ ಪರಿಣಾಮವೇ ಜನವಸತಿ ಪ್ರದೇಶಕ್ಕೆ ನೀರು ನುಗ್ಗಲು ಕಾರಣವಾಗಿದೆ ಎಂಬ ಮಾತುಗಳು ಕೇಳಿಬರುತ್ತಿವೆ.


### ಮೇಯರ್, ಆಯುಕ್ತರ ಭೇಟಿ

ಘಟನೆ ವಿಷಯ ತಿಳಿಯುತ್ತಿದ್ದಂತೆ ಮೇಯರ್ ಗೌತಮ್ ಕುಮಾರ್ ಹಾಗೂ ಬಿಬಿಎಂಪಿ ಆಯುಕ್ತ ಬಿ.ಎಚ್. ಅನಿಲ್ ಕುಮಾರ್ ಅವರುಗಳು ಸ್ಥಳಕ್ಕೆ ತೆರಳಿ ಅಲ್ಲಿನ ಪರಿಸ್ಥಿತಿಯನ್ನು ಅವಲೋಕಿಸಿದರಲ್ಲದೆ, ಕೆರೆ ನೀರು ನುಗ್ಗಿ ಸಂಕಷ್ಟಕ್ಕೆ ಸಿಲುಕಿದವರ ರಕ್ಷಣೆ ಮಾಡಿ ಅವರನ್ನು ಸುರಕ್ಷಿತ ಪ್ರದೇಶದಲ್ಲಿ ಇರಿಸಲು ಕ್ರಮ ತೆಗೆದುಕೊಂಡರು. ಹಾಗೆಯೇ ಇದಕ್ಕೆ ಕಾರಣರಾದವರ ವಿರುದ್ಧ ಕ್ರಮ ಜರುಗಿಸುವಂತೆಯೂ ಅಧಿಕಾರಿಗಳಿಗೆ ಸೂಚನೆ ನೀಡಿದರು.

‘ಸಮ್ಮಿಶ್ರ ಸರ್ಕಾರ

SSLC
2020 BOARD EXAM
One Stop Academic & Examination Books
Augmented Reality - Science & Mathematics

ZEN
XPLORER BOOKS
Available in all Bookstores



'RIP'PING K'TAKA'S FORESTS!

P5

## J&K

INFILTRATION UP POST ARTICLE 370's DILUTION

Infiltration of terrorists into J&K from Pakistan has increased substantially since the dilution of the Article 370, government data shows.



Emergency personnel evacuate residents after a breach in Hulimavu lake flooded several areas on Sunday

# Lake breach affects 800 houses

**EXPRESS NEWS SERVICE** @Bengaluru

HULIMAVU Lake near Bannerghatta became the third lake to be breached in one-and-a-half months on Sunday around 12.30 pm, flooding about 800 houses with water level rising up to 5 feet. No casualties were reported, but hundreds of people rushed out of their houses in panic when water started entering their homes. A clueless Bruhat Bengaluru Mahanagara Palike suspects someone to have opened a portion of the bund to force the water level to go down, causing the water to gush out in force. At least 193 people were rescued by personnel using boats in an operation that lasted till 8 pm, by when the breach was fixed. P2

**Our house is flooded and all our furniture damaged. We went to a neighbour's house in the second floor. We were rescued by the civil defence team**

Priya, resident, BTM Layout

### 193 PEOPLE RESCUED

- BBMP suspects someone opened the bund to let water out
- Police have been asked to investigate
- Damage to be estimated after water recedes
- No casualties reported

HOWZZATI

## This Sachin develops cricketer rating system

ಸಿಹಿಯಾದ ಆತ್ಮವಿಶ್ವಾಸ

healthcare@yahoo.co.in

ಕೆರೆ ಸ್ವಚ್ಛತೆ ಕಾಮಗಾರಿ ವೇಳೆ ದುರಂತ

# ಹುಳಿಮಾವು ಕೆರೆ ಏರಿ ಒಡೆದು 1000 ಮನೆಗಳಿಗೆ ನೀರು

## ಹಲವು ಬಡಾವಣೆ ಜಲಾವೃತ, ರಸ್ತೆ ಸಂಪರ್ಕ ಕಡಿತ, ನೀರಲ್ಲಿ ಮುಳುಗಿದ ಕಾರು, ಬೈಕ್ | ಜನರ ಪರದಾಟ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಹುಳಿಮಾವು ಕೆರೆ ಏರಿ ಒಡೆದು ಕೃಷ್ಣ ಲೇಔಟ್, ಅವನಿ ಶೃಂಗೇರಿ ಲೇಔಟ್ ಸೇರಿದಂತೆ ಕೆರೆ ಸುತ್ತಮುತ್ತದ ಬಡಾವಣೆಗಳಿಗೆ ಭಾನುವಾರ ಮಧ್ಯಾಹ್ನ ಏಕಾಏಕಿ ನೀರು ನುಗ್ಗಿ ರಸ್ತೆ ಸಂಪರ್ಕ ಕಡಿತಗೊಂಡಿದೆ. ಬಡಾವಣೆ ಅಕ್ಷರಶಃ ದ್ವೀಪದಂತಾಗಿ ಜನರು ಪರದಾಡಿದ್ದಾರೆ. ಜತೆಗೆ ಪ್ರಮಾಣ ಹಾನಿ ಉಂಟಾಗಿದೆ.

ಬೊಮ್ಮನಹಳ್ಳಿ ವಲಯದ ಅರಕೆರೆ ವಾರ್ಡ್‌ನ ಸುಮಾರು 140 ಎಕರೆ ವಿಸ್ತೀರ್ಣದ ಕೆರೆ, ನಗರದಲ್ಲಿ ಉತ್ತಮ ಮಳೆ ಯಾಗಿದ್ದರಿಂದ ಭರ್ತಿಯಾಗಿತ್ತು. ಭಾನುವಾರ ಮಧ್ಯಾಹ್ನ ಎರಡು ಗಂಟೆ ಸುಮಾರಿಗೆ ಕೃಷ್ಣ ಲೇ ಔಟ್ ಭಾಗದಲ್ಲಿ ಕೆರೆ ಏರಿ ಒಡೆದು ಪ್ರವಾಹದ ರೀತಿಯಲ್ಲಿ ಕೃಷ್ಣ ಲೇಔಟ್, ಅವನಿ ಶೃಂಗೇರಿ, ಆರ್.ಆರ್.ರೆಸಿಡೆನ್ಸಿ, ಸರಸ್ವತಿಪುರ, ಶಾಂತಿ ನಿಕೇತನ, ವೈಶ್ಯಬ್ಯಾಂಕ್ ಕಾಲೋನಿ, ಬಿಡಿಎ ಲೇಔಟ್ ಸೇರಿದಂತೆ ವಿವಿಧ ಲೇಔಟ್‌ನ ಸಾವಿರಕ್ಕೂ ಹೆಚ್ಚು ಮನೆಗಳಿಗೆ ಕೆರೆಯ ನೀರು ನುಗ್ಗಿದೆ. ಪರಿಣಾಮ ಮನೆ ಮುಂದೆ ನಿಲ್ಲಿಸಲಾಗಿದ್ದ ಕಾರು, ಬೈಕ್, ಆಟೋ ಸೇರಿದಂತೆ ಮನೆಯಲ್ಲಿದ್ದ ಬಟ್ಟೆ, ಹಾಸಿಗೆ, ದವಸ-ಧಾನ್ಯಗಳು ನೀರಿನಲ್ಲಿ ಕೊಚ್ಚಿಕೊಂಡು ಹೋಗಿವೆ. ತಕ್ಷಣ ಬಿಬಿಎಂಪಿ ಅಧಿಕಾರಿಗಳು ಒಡೆದು ಹೋದ ಕೆರೆ ಏರಿಯನ್ನು ಜೆಸಿಬಿ ಯಂತ್ರಗಳಿಂದ ಭರ್ತಿ ಮಾಡುವ ಕಾರ್ಯ ಆರಂಭಿಸಿದರಾದರೂ ತಕ್ಷಣ ತಡೆಗಟ್ಟುವುದಕ್ಕೆ ಸಾಧ್ಯವಾಗಲಿಲ್ಲ. ನಿರಂತರವಾಗಿ ಸುಮಾರು ಆರೇಳು ಗಂಟೆಗಳ ಕಾರ್ಯಾಚರಣೆ ಬಳಿಕ ಒಡೆದ ಕೆರೆ ಏರಿ ಮರುಭರ್ತಿ ಮಾಡಲಾಯಿತು.

**ಕೆರೆ ದುರಂತದ ಇನ್ನಷ್ಟು ಸುದ್ದಿಗಳು ಪುಟ 2**



ಹುಳಿಮಾವು ಕೆರೆ ಏರಿ ಒಡೆದು ಕೆರೆ ಸಮೀಪದ ಬಡಾವಣೆ ಜಲಾವೃತಗೊಂಡಿರುವುದು.